ಸುಖಗಳನ್ನು ನಾಶಮಾಡುವದನ್ನು ಹೆಚ್ಚಾಗಿ ಸ್ಮರಿಸಿರಿ" – ಅಂದರೆ ಮರಣವನ್ನು

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಸುಖಗಳನ್ನು ನಾಶಮಾಡುವದನ್ನು ಹೆಚ್ಚಾಗಿ ಸ್ಮರಿಸಿರಿ" – ಅಂದರೆ ಮರಣವನ್ನು. [حسن] [رواه الترمذي والنسائي وابن ماجه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮರಣವನ್ನು ಹೆಚ್ಚಾಗಿ ನೆನಪಿಸಿಕೊಳ್ಳಲು ಪ್ರೋತ್ಸಾಹಿಸಿದ್ದಾರೆ. ಅದನ್ನು ನೆನಪಿಸಿಕೊಳ್ಳುವುದರಿಂದ ಮನುಷ್ಯನು ಪರಲೋಕವನ್ನು ನೆನಪಿಸಿಕೊಳ್ಳುತ್ತಾನೆ, ಮತ್ತು ಅವನ ಹೃದಯದಲ್ಲಿರುವ ಇಹಲೋಕ ಸುಖಗಳ – ವಿಶೇಷವಾಗಿ ನಿಷಿದ್ಧವಾದವುಗಳ – ಪ್ರೀತಿಯು ನಾಶವಾಗುತ್ತದೆ.

http://sunnah.global/hadeeth/kn/show/66232